ಅವುಗಳ ಪರೀವಿಕ್ಷಣೆ ವರದಿಯ ಪ್ರತಿಗಳನ್ನು ಅನುಬಂಧ–2 ರಲ್ಲಿ ಲಗತ್ತಿಸಲಾಗಿದೆ.

ಆ) ಯಾವುದೇ ತರಬೇತಿದಾರರಿಲ್ಲದೇ ತರಬೇತಿ ನೀಡಲಾಗಿದೆ ಎಂದು ನಕಲಿ ದಾಖಲೆಗಳನ್ನು ಸೃಷ್ಟಿಸಿ, ತರಬೇತಿ ನೀಡದೆ ಇರುವ ಸಂಸ್ಥೆಗಳಿಗೆ ತರಬೇತಿ ಹಣವನ್ನು ಪಾವತಿಸಿರುವುದು ಹಾಗೂ ತರಬೇತಿ ನೀಡದಿರುವ ವಿ.ಟಿ.ಪಿ.ಗಳಿಗೆ (Vocational Training Programe) ತರಬೇತಿ ಹಣ ಪಾವತಿಸಿರುವಲ್ಲಿ ಇಲಾಖಾ ಅಧಿಕಾರಿಗಳು ಶಾಮೀಲಾಗಿರುವುದು ಸರ್ಕಾರದ ಗಮನಕ್ಕೆ ಬಂದಿರು ವುದಿಲ್ಲ.

ಇ) ಇಲಾಖೆಯ ಅಪರ ನಿರ್ದೇಶಕರು (ತರಬೇತಿ) ಬೇನಾಮಿ ಹೆಸರಲ್ಲಿ ಯಾವುದೇ ವಿ.ಟಿ.ಪಿ.ಗಳನ್ನು (Vocational Training Programe) ನೋಂದಣಿ ಮಾಡಿಕೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ.

ನ್ಯಾಯಾಲಯಗಳ ತೀರ್ಪಿನಂತೆ ಐ.ಟಿ.ಐ. ಪ್ರಾಚಾರ್ಯರುಗಳಿಗೆ ಹಿಂಬಡ್ತಿ

1027 (1961); ಶ್ರೀ ಐಹೊಳೆ ಡಿ. ಮಹಾಲಿಂಗಪ್ಪ (ರಾಯಭಾಗ)

ಅ) ಸರ್ವೋಚ್ಚ ನ್ಯಾಯಾಲಯದ ಆದೇಶಾನುಸಾರ "All those persons who are degree holders in the feeder cadre of the Training Officers shall not be reverted in the meantime" ಇದರಂತೆ ಉಪವೃಂದ (Feedr cadre) ದಿಂದ ಮುಂಬಡ್ತಿ ಪಡೆದ ಪ್ರಾಚಾರ್ಯರುಗಳ ವಿವರಗಳನ್ನು ಒದಗಿಸುವುದು;

ಆ) ಉಪ ವೃಂದದಲ್ಲಿರುವ (Feedr cadre) ನಿಯಮಬಾಹಿರವಾಗಿ ಮುಂಬಡ್ತಿ ಪಡೆದ ಪ್ರಾಚಾರ್ಯರುಗಳಿಗೆ ಹಿಂಬಡ್ತಿ ಪ್ರಕ್ರಿಯೆಯು ಯಾವ ಹಂತದಲ್ಲಿದೆ, ಹಿಂಬಡ್ತಿ ನೀಡುವಲ್ಲಿ ಅನಗತ್ಯ ಕಾಲವಿಳಂಬ ಮಾಡುತ್ತಿರುವ ಕಾರಣಗಳೇನು, ಇದಕ್ಕೆ ಕಾರಣಕರ್ತರಾದ ಇಲಾಖಾ ಅಧಿಕಾರಿಗಳ ವಿರುದ್ಧ ಸರ್ಕಾರವು ಕೈಗೊಂಡ ಕ್ರಮಗಳೇನು;

ಇ) ಪ್ರಾಚಾರ್ಯರುಗಳಿಗೆ ಹಿಂಬಡ್ತಿ ನೀಡಿದಲ್ಲಿ ತೆರವಾಗುವ ಹುದ್ದೆಗಳಿಗೆ ನಿಯಮನುಸಾರ ಅರ್ಹರಿರುವ ತರಬೇತಿ ಅಧಿಕಾರಿಗಳ ಸಂಪೂರ್ಣ ವಿವರಗಳನ್ನು ಒದಗಿಸುವುದು?

ಶ್ರೀ ಪಿ. ಟಿ. ಪರಮೇಶ್ವರ ನಾಯಕ್ (ಮಾನ್ಯ ಕಾರ್ಮಿಕ ರಾಜ್ಯ ಸಚಿವರು)

ಅ ಇಲಾಖೆಯ ವೃಂದ ಮತ್ತು ನೇಮಕಾತಿ ನಿಯಮಗಳು 1998 ರಂತೆ ಪ್ರಾಚಾರ್ಯರು ದರ್ಜೆ–2 ಹುದ್ದೆಗೆ ತರಬೇತಿ ಅಧಿಕಾರಿ / ಕಿರಿಯ ತರಬೇತಿ ಅಧಿಕಾರಿ ಹುದ್ದೆಯಿಂದ ವರ್ಗಾವಣೆ ಮೇರೆಗೆ ಶೇ. 33 1/3 ಅನುಪಾತದಂತೆ ಮುಂಬಡ್ತಿ ಪಡೆದ ಪ್ರಾಚಾರ್ಯರ ಪಟ್ಟಿಯನ್ನು ಅನುಬಂಧ–1 ರಲ್ಲಿ ಲಗತ್ತಿಸಿದೆ.

ಆ) ಪ್ರಸ್ತುತ ಸದರಿ ಪ್ರಕರಣವು ಮಾನ್ಯ ಸರ್ವೋಚ್ಚ ನ್ಯಾಯಾಲಯದ ಸಿವಿಲ್ ಅಫೀಲು ಸಂ: 27094–95/2012 ರಲ್ಲಿ ಬಾಕಿ ಇರುತ್ತದೆ. ಸದರಿ ಪ್ರಕರಣದ ಅಂತಿಮ ತೀರ್ಪನ್ನು ನಿರೀಕ್ಷಿಸಲಾಗಿದೆ.

ಇ) ಪ್ರಕರಣವು ಮಾನ್ಯ ಸರ್ವೋಚ್ಚ ನ್ಯಾಯಾಲಯದ ಮುಂದೆ ವಿಚಾರಣೆ ಯಲ್ಲಿರುವುದರಿಂದ ಅಂತಿಮ ತೀರ್ಪು ಬಂದ ನಂತರ ಹಾಗೂ ಸರ್ಕಾರವು ತೆಗೆದುಕೊಳ್ಳುವ ಕ್ರಮವನ್ನಾಧರಿಸಿ, ಅದರಂತೆ ಇಲಾಖೆ ಯಲ್ಲಿ ಮುಂದಿನ ಕ್ರಮ ಕೈಗೊಳ್ಳಲಾಗುವುದು.

ಅನುಬಂಧ

ಪ್ರಾಚಾರ್ಯರು ದರ್ಜೆ–2 ಸಮಾನಾಂತರ ಹುದ್ದೆಗೆ ವರ್ಗಾವಣೆ ಮುಂಬಡ್ತಿ ಮೇರೆಗೆ ಶೇ. 33 1/3 ರ ಅನುಪಾತದಂತೆ ತರಬೇತಿ ಅಧಿಕಾರಿ ಹುದ್ದೆಯಿಂದ ಮುಂಬಡ್ತಿ ಪಡೆದವರ ವಿವರ (ಬಿ.ಇ. ಪದಗಿ ಮೇರೆಗೆ)

ಕ್ರ. ಸಂ.	ಅಧಿಕಾರಿಗಳ ಹೆಸರು ಮತ್ತು ಪ್ರಸ್ತುತ ಕಾರ್ಯ ನಿರ್ವಹಿಸುತ್ತಿರುವ ಸ್ಥಳ ಶ್ರೀಮತಿ / ಶ್ರೀ	ಮುಂಬಡ್ತಿ ನೀಡಿರುವ ಆದೇಶ ಸಂಖ್ಯೆ	ಷರಾ
1	ಅಮರನಾಥ, ನಿವೃತ್ತ ಪ್ರಾಚಾರ್ಯರು ದರ್ಜೆ–2 ಕೈ.ತ.ಸಂಸ್ಥೆ, ನಂಜನಗೂಡು.	ಕಾಇ 395 ಐಟಿಐ 205 ದಿನಾಂಕ: 22.12.2006	ಸ್ವಯಂ ನಿವೃತ್ತಿ ಹೊಂದಿರುತ್ತಾರೆ.
2	ಎಂ. ನಾಗರಾಜ, ಉಪ ಪ್ರಾಚಾರ್ಯರು ದರ್ಜೆ–2 ಕೈ.ತ.ಸಂಸ್ಥೆ, ತುಮಕೂರು ರಸ್ತೆ, ಬೆಂಗಳೂರು–22	ಡಿಟೋ	
3	ಹೆಚ್. ಎಂ. ಜರೀಫುಲ್ಲಾ, ಪ್ರಾಚಾರ್ಯರು ದರ್ಜೆ–2 ಕೈ.ತ.ಸಂಸ್ಥೆ, ಚಳ್ಳಕೆರೆ	ಉತಇ/ತರಬೇತಿ/ಆಡಳಿತ–6/ವಿವ–64/ 06.07. ದಿನಾಂಕ: 25.08.2011	
4	ರಾಮಗೌಡ	ಡಿಟೋ	

	ಬಾಬಾಗೌಡ ಪಾಟೀಲ ಪ್ರಾಚಾರ್ಯರು ದರ್ಜೆ–2 ಕೈ.ತ.ಸಂಸ್ಥೆ, ರಾಮದುರ್ಗ		

ಪ್ರಾಚಾರ್ಯರು ದರ್ಜೆ–2 / ಸಮಾನಾಂತರ ಹುದ್ದೆಗೆ ವರ್ಗಾವಣೆ ಮುಂಬಡ್ತಿ ಮೇರೆಗೆ ಶೇ. 33 1/3ರ ಅನುಪಾತದಂತೆ ಕಿರಿಯ ತರಬೇತಿ ಅಧಿಕಾರಿ ಹುದ್ದೆಯಿಂದ ಮುಂಬಡ್ತಿ ಪಡೆದವರ ವಿವರ (ಬಿ.ಇ. ಪದವಿ ಮೇರೆಗೆ)

ಕ್ರ ಸಂ.	ಅಧಿಕಾರಿಗಳ ಹೆಸರು ಮತ್ತು ಪ್ರಸ್ತುತ ಕಾರ್ಯ ನಿರ್ವಹಿಸುತ್ತಿರುವ ಸ್ಥಳ ಶ್ರೀಮತಿ / ಶ್ರೀ	ಮುಂಬಡ್ತಿ ನೀಡಿರುವ ಆದೇಶ ಸಂಖ್ಯೆ	ಷರಾ
1	ಎಸ್.ಎಸ್,ಖಿಲಾರೆ, ಪ್ರಾಚಾರ್ಯರು ದರ್ಜೆ–1 ಕೈ.ತ.ಸಂಸ್ಥೆ, ಗೋಕಾಕ್	ಕಾಇ 39 ಐಟಿಐ 99 ದಿನಾಂಕ: 29.08.2000	
2	ಎ. ಜನಾರ್ಧನಂ, ನಿವೃತ್ತ ಪ್ರಾಚಾರ್ಯರು ದರ್ಜೆ–2 ಕೈ.ತ.ಸಂಸ್ಥೆ, ಶಿರಾ	ಡಿಟೋ	ನಿವೃತ್ತಿ ಹೊಂದಿರುತ್ತಾರೆ
3	ಎ. ಟಿ. ರಾಮಚಂದ್ರ ನಿವೃತ್ತ ಪ್ರಾಚಾರ್ಯರು ದರ್ಜೆ–2 ಕೈ.ತ.ಸಂಸ್ಥೆ, ಗುತ್ತಲ	ಡಿಟೋ	ನಿವೃತ್ತಿ ಹೊಂದಿರುತ್ತಾರೆ
4	ಎಸ್. ವಿ. ಕೋರಿ, ನಿವೃತ್ತ ಪ್ರಾಚಾರ್ಯರು	ಡಿಟೋ	ನಿವೃತ್ತಿ ಹೊಂದಿರುತ್ತಾರೆ

	ದರ್ಜೆ–1 ಕೈ.ತ.ಸಂಸ್ಥೆ, ಸಕಲೇಶಪುರ		
5	ಎಂ.ಎಂ. ಪೊಲೀಸ್ ಪಾಟೀಲ್, ನಿವೃತ್ತ ಪ್ರಾಚಾರ್ಯರು ದರ್ಜೆ–2	ಡಿಟೋ	ನಿವೃತ್ತಿ ಹೊಂದಿರುತ್ತಾರೆ

ಬರಪೀಡಿತ ತಾಲ್ಲೂಕುಗಳು

1028 (1946); ಶ್ರೀ ಅಪ್ಪಾಜಿ ಚನ್ನಬಸವರಾಜ್ ಶಂಕರರಾವ್ ನಾಡಗೌಡ (ಮುದ್ದೇಬಿಹಾಳ)

ಅ) 2013–14ನೇ ಸಾಲಿನಲ್ಲಿ ರಾಜ್ಯದಲ್ಲಿ ಬರಪೀಡಿತ ತಾಲ್ಲೂಕು ಎಂದು ಸರ್ಕಾರವು ಘೋಷಣೆ ಮಾಡಿರುವ ತಾಲ್ಲೂಕುಗಳಾವುವು (ಸಂಪೂರ್ಣ ಮಾಹಿತಿ ನೀಡುವುದು);

ಆ) ಬರಪೀಡಿತ ತಾಲ್ಲೂಕುಗಳಿಗೆ ಕೇಂದ್ರ ಸರ್ಕಾರದಿಂದ ಒದಗಿಸಲಾದ ಅನುದಾನವೆಷ್ಟು (ಸಂಪೂರ್ಣ ಮಾಹಿತಿ ನೀಡುವುದು);

ಇ) ರಾಜ್ಯ ಸರ್ಕಾರದಿಂದ ಮಂಜೂರಾದ ಅನುದಾನವೆಷ್ಟು;

ಈ) ಬರಪೀಡಿತ ತಾಲ್ಲೂಕುಗಳಿಗೆ ಮಂಜೂರಾದ ಹಣದಲ್ಲಿ ಉಪಯೋಗವಾದೇ ಉಳಿದ ಹಣವೆಷ್ಟು ಮತ್ತು ಸರ್ಕಾರದ ಮಾನದಂಡಗಳೇನು (ವಿವರ ನೀಡುವುದು);

ಶ್ರೀ ವಿ. ಶ್ರೀನಿವಾಸ ಪ್ರಸಾದ್ (ಮಾನ್ಯ ಕಂದಾಯ ಮಂತ್ರಿಗಳು)

ಅ) 2013–14ನೇ ಸಾಲಿನಲ್ಲಿ ರಾಜ್ಯದಲ್ಲಿ 28 ಜಿಲ್ಲೆಗಳ 125 ತಾಲ್ಲೂಕುಗಳನ್ನು ಬರಪೀಡಿತ ಪ್ರದೇಶಗಳೆಂದು ಘೋಷಿಸಲಾಗಿದೆ. ವಿವರ ಅನುಬಂಧ – 1 ರಲ್ಲಿ ನೀಡಿದೆ.